**ಓ.ಎಸ್-80/2023** **ಡಿ.ಡಬ್ಲ್ಯೂ-6 (ಮಹದೇವ)**

ದಿನಾಂಕಃ **17.12.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಪ್ರತಿವಾದಿ ಪರ ಶ್ರೀ.ಎನ್.ಕೆ.ಎಸ್.ವಕೀಲರಿಂದ :**

(ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಸದರಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳನ್ನು ಓದಿಸಿ, ಕೇಳಿ ತಿಳಿದುಕೊಂಡು ಸರಿ ಮತ್ತು ಸತ್ಯವಾಗಿರುತ್ತವೆ ಎಂದು ಸಹಿ ಮಾಡಿರುವುದಾಗಿ ತಿಳಿಸಿರುತ್ತಾರೆ.)

**ಪಾಟೀ ಸವಾಲು : ವಾದಿ ಪರ ಶ್ರೀ ಎಸ್.ಕೆ.ವಕೀಲರಿಂದ :**

ವಾದಿ ಮತ್ತು ಪ್ರತಿವಾದಿ ಸಂಬಂಧಿಕರು. ನನಗೂ ಸಹ ಸಂಬಂಧಿಕರು ಎಂದರೆ ಒಂದೇ ಊರಿನವರು ಎಂದು ಹೇಳುತ್ತಾರೆ. ಸಂಬಂಧಿಕರು ಎಂದು ಹೇಳಿ ಬರೆಯಿಸಿರುವುದು ಸರಿ ಇದೆ. ನಾನು ಮನೆ ಕಟ್ಟಲು ಹೋಗಿಲ್ಲ ಎಂದರೆ ಸರಿಯಲ್ಲ. ಮನೆ ಕಟ್ಟಿ ಸುಮಾರು 17-18 ವರ್ಷಗಳಾಗಿರಬಹುದು. ಮನೆ ಕಟ್ಟುವ ಕಾಲಕ್ಕೆ ಆಸ್ತಿ ಯಾರಿಗೆ ಸೇರಿತ್ತು ಎಂದು ನಾನು ತಿಳಿದುಕೊಂಡಿಲ್ಲ. ನಮ್ಮ ಮನೆಗೂ, ವಾದಿ, ಪ್ರತಿವಾದಿಯ ಮನೆಗೂ ಸುಮಾರು 50 ಅಡಿ ಅಂತರವಿದೆ. ನಮ್ಮ ಮನೆಗೆ ದಾವಾ ಆಸ್ತಿಯಲ್ಲಿರುವ ಮನೆ ಅಕ್ಕ-ಪಕ್ಕದ ಮನೆಯಾಗಿರುವುದಿಲ್ಲ. ದಾವಾ ಆಸ್ತಿಯಲ್ಲಿರುವ ಮನೆಯು ವಾದಿಗೆ ಸೇರಿದ್ದು, ಪ್ರತಿವಾದಿಯು ಆ ಮನೆಯಲ್ಲಿದ್ದುಕೊಂಡು ವಾದಿಗೆ ತೊಂದರೆ ಕೊಡುತ್ತಿದ್ದರೆ ಎಂದರೆ ಸರಿಯಲ್ಲ. ಪ್ರತಿವಾದಿಯು ಸಂಬಂಧಿಕರಿರುವುದರಿಂದ ಆತನಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**